Regd No B G 165 5-1-1970

SATYAVADI Daily, MYSORE 4 53 rd Year of Publication

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಇಂದಿರಾ ಮಂತ್ರಿಮಂಡಲ ಉರುಳಿಸಲು ಸಿದ್ಧತೆ

ಪುರಸಭೆ

1969 ನೇ ಡಿಸೆಂಬರ್ ಮಾಹೆ 30 ರ ಮುಂದುವರಿದ ಸಾಧಾರಣ ಪುರಸಭಾಧಿವೇಶನವು ಪುರಸಭಾ ಭವನದಲ್ಲಿ ಈ ಮಾಹೆ 9 ನೇ ತಾ|| ಮಧ್ಯಾಹ್ನಾತ್ಪರ 4 ಗಂಟೆಗೆ ನಡೆಯುವುದಾಗಿದೆ.

★

1969 ನೇ ಡಿಸೆಂಬರ್ ಮಾಹೆ 29 ರ ಮುಂದುವರಿದ ಬಜೆಟ್ ಪುರಸಭಾಧಿವೇಶನವು ಈ ಮಾಹೆ 7 ನೇ ಬುಧವಾರ ಮಧ್ಯಾಹ್ನಾತ್ಪರ 4 ಗಂಟೆಗೆ ನಡೆಯುವುದಾಗಿದೆ.

★

ಇನ್ನೂರು ಕೋಟಿ ಕೇಳಿಕೆ

ಹಳೆಯ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯು ನಾಲ್ಕನೇ ಯೋಜನೆಯಲ್ಲಿ ದೇಶದ ವಿದ್ಯಾವಂತರಿಗೆ ನೌಕರಿ ಒದಗಿಸಲು ರೂ. ಇನ್ನೂರು ಕೋಟಿ ಕೇಳಿಕೆ ಹಾಕಲಿರುವುದೆಂದು ನವ ದೆಹಲಿ ವಾರ್ತೆ.

★

ಮತ್ತೆ ಕಾಶ್ಮೀರ

ಪಾಕೀಸ್ತಾನ ಅಧ್ಯಕ್ಷ ಯಾಹ್ಯಾ ಖಾನ್ ಮಾಸ್ಕೋವಿಗೆ ಭೇಟಿ ಕೊಟ್ಟಾಗ ಅಲ್ಲಿಯ ಮಾತುಕತೆಗಳಲ್ಲಿ ಭಾರತ ಪಾಕೀಸ್ತಾನ ಕಾಶ್ಮೀರ ಮತ್ತಿತರ ಸಮಸ್ಯೆಗಳನ್ನು ಎತ್ತುವಂದು ಹೇಳಲಾಗಿದೆ.

★

ಭಾರತಕ್ಕೆ ಸಾಲಾ

ಭಾರತಕ್ಕೆ ಜರ್ಮನ್ ಫೆಡರಲ್ ಗಣರಾಜ್ಯ ರೂ. 64 30 ಕೋಟಿ ಸಾಲ ನೀಡಲಿದೆ.

○

★ 5 ವರ್ಷವಾದರೂ ಹುಲಿಗಳಿಗೆ ರಕ್ಷಣೆ ಕೊಡಬೇಕೆಂದು ಭಾರತ ವನ್ಯ ಜೀವಿ ಸಮಿತಿಯು ಶಿಫಾರಸು ಆಗಿದೆ.

ಪಾಕ್‌ನವರ ದಾಳಿ

ಪಿಲಾಗಿನಿಂದ ಬಂದಿರುವ ವಾರ್ತೆಯ ಪ್ರಕಾರ ಇಪ್ಪತ್ತೈದು ಪಾಕೀಸ್ತಾನದ ಆಯುಧಧಾರಿಗಳು ಭಾರತದ ಪ್ರದೇಶಗಳಿಗೆ 1 ಮೈಲಿ ನುಗ್ಗಿ ಕೊಲ್ಲಿ ಗ್ರಾಮದ ಮೇಲೆ ದಾಳಿ ನಡೆಸಿದರು.

★

ಮರ ವಶ

ಲಾರಿಯೊಂದರಲ್ಲಿ ಸಾಗಿಸಲಾಗುತ್ತಿದ್ದ ಅರ್ಧ ಲಕ್ಷ ರೂಪಾಯಿ ಬೆಲೆಯ ಕರೀ ಮರವನ್ನು ಅರಣ್ಯ ಅಧಿಕಾರಿಗಳು ವಶಪಡಿಸಿಕೊಂಡರೆಂದು, ಲಾರಿಯಲ್ಲಿದ್ದವರು ಪರಾರಿ ಆದರೆಂದು ತರೀಕೆರೆ ವಾರ್ತೆ.

○

ಪೋಲೀಸು ಕಾವಲು

ಶಿವಮೊಗ್ಗ ಗಾಂಧಿ ಮಂದಿರ ಬಗ್ಗೆ ಹಳೆಯ ಹಾಗೂ ಹೊಸ ಕಾಂಗ್ರೆಸಿಗರಲ್ಲಿ ಕಲಹ ಆರಂಭವಾಗಿ ಪೋಲೀಸು ಕಾವಲನ್ನು ಹಾಕಿದೆ. ಮಂದಿರದಲ್ಲಿ ಕಾಂಗ್ರೆಸ್ ಕಚೇರಿ ಇದೆ.

○

ಹೋರಾಟ ಆರಂಭ

ಚಿತ್ತೂರು ಕಾಂಗ್ರೆಸ್ ಕಚೇರಿ ವಿಚಾರದಲ್ಲಿ ಹೊಸ ಹಾಗೂ ಹಳೆಯ ಕಾಂಗ್ರೆಸಿಗರಲ್ಲಿ ಹೋರಾಟ ಆರಂಭವಾಗಿದೆ.

★

ಪ್ರಧಾನರಿಗೆ ಖರ್ಚು

ಕಳೆದ ಹದಿನೈದು ತಿಂಗಳುಗಳಲ್ಲಿ ಪ್ರಧಾನಿ ಇಂದಿರಾರವರ ಉತ್ತರ ಪ್ರದೇಶದಲ್ಲಿ ಪ್ರವಾಸಗಳಿಗೆ ರಾಜ್ಯ ಸರ್ಕಾರಕ್ಕೆ ನಲವತ್ತು ಲಕ್ಷ ರೂ. ವೆಚ್ಚವಾಗಿದೆಯೆಂದು ಅಲ್ಲಿನ ಮುಖ್ಯ ಮಂತ್ರಿ ಶ್ರೀ ಸಿ. ಬಿ. ಗುಪ್ತ ನವ ದೆಹಲಿಯಲ್ಲಿ ತಿಳಿಸಿದರು.

ನೀವು ಲಕ್ಷಾಧೀಶ್ವರರಾದರೂ ಆಗಬಹುದು

ಮೈಸೂರು ರಾಜ್ಯದ ಲಾಟರಿ

ಟಿಕೆಟ್ಟು ಒಂದಕ್ಕೆ ರೂ. 1-00

ಅಧಿಕೃತ ಮಾರಾಟಗಾರರು :

ಬಾಹುಸಾರ್ ಕಂಪೆನಿ, ಓಲ್ಡ್ ಬ್ಯಾಂಕ್ ರೋಡ್, ಮೈಸೂರು.

ಬಾಹುಸಾರ್ ಕಂಪೆನಿ, ಸೂರಡಿ ರಸ್ತೆ, ಮೈಸೂರು-4.

ಭಾರತಕ್ಕೆ ನಿಗದಿ

ವಾಷಿಂಗ್ಟನ್ನಿನಿಂದ ಬಂದ ವಾರ್ತೆ ಪ್ರಕಾರ ಅಂತರ್‌ರಾಷ್ಟ್ರೀಯ ನಿಧಿಯಿಂದ ಭಾರತಕ್ಕೆ ರೂ. 94.5 ಕೋಟಿ ನಿಗದಿ ಮಾಡಲಾಗಿದೆ.

●

ಇ ವಿ ಆರ್ ಪುಸ್ತಕಕ್ಕೆ ನಿಶೇಧ

ರಾಮಾಯಣ ಟ್ರೂ ರೀಡಿಂಗ್ ಎಂಬ ಶ್ರೀ ಇ. ವಿ. ರಾಮಸ್ವಾಮಿ ನಾಯಕರ ಇಂಗ್ಲೀಷ್ ಪುಸ್ತಕವನ್ನು, ಆ ಪುಸ್ತಕದ ಹಿಂದಿ ಭಾಷಾಂತರವನ್ನು ಉತ್ತರ ಪ್ರದೇಶ ಸರ್ಕಾರವು ನಿಷೇಧಿಸಿದೆ. ಹಿಂದೂಗಳ ಮತ ಮತ್ತು ಧಾರ್ಮಿಕ ನಂಬಿಕೆಯನ್ನು ಅವಮಾನ ಪಡಿಸಿ ಹಿಂದೂಗಳ ಧಾರ್ಮಿಕ ಮನೋಭಾವನ್ನು ನೋಯಿಸುವ ವಿಚಾರಗಳು ಈ ಪುಸ್ತಕದಲ್ಲಿರುವುದಾಗಿ ತಿಳಿಸಿದೆ.

●

ಮನಿಲಾದ ವಿಮಾನು ಗ್ರಾನುದಲ್ಲಿ ಹದಿನೇಳು ವರ್ಷದ ಹುಡುಗಿಯೋರ್ವಳು ಕುರುಡರು ನೋಡುವಂತೆ ಕುಂಟರು ನಡೆಯುವಂತೆ ಮಾಡಿರುವುದಾಗಿ ಪಕ್ಕದಿಂದ ಜನ ಗುಂಪುಗುಂಪಾಗಿ ಬರುತ್ತಿರುವುದಾಗಿ ವರದಿಯಾಗಿದೆ.

ಮುರಾರ್ಜಿ ಹೇಳಿಕೆ

ಅಹಮದಾಬಾದಿನಲ್ಲಿ ನಿನ್ನೆ ಪತ್ರಿಕಾ ಸಮ್ಮೇಳನದಲ್ಲಿ ಮಾಜಿ ಉಪ ಪ್ರಧಾನಿ ಶ್ರೀ ಮುರಾರ್ಜಿ ದೇಸಾಯ್‌ರವರು ಮಾತನಾಡುತ್ತಾ, ಕೇಂದ್ರದಲ್ಲಿರುವ ಇಂದಿರಾರವರ ಮಂತ್ರಿಮಂಡಲ ಉರುಳಿಸಲು ಯಾವ ಪ್ರಯತ್ನವೂ ಇಲ್ಲದೆ ಕಮ್ಯೂನಿಸ್ಟರ ಸಹಕಾರ ಸಹ ಅಪೇಕ್ಷಿಸುವುದಾಗಿ ತಿಳಿಸಿ ಜನಸಂಘ ಮತ್ತು ಸ್ವತಂತ್ರ ಪಕ್ಷಗಳ ಬೆಂಬಲ ಪಡೆಯಲು ಸಹ ಹಿಂಜರಿಯುವುದಿಲ್ಲ ಎಂದರು.

○

ಅಧಿಕಾರವಿಲ್ಲ

ಹೊಟೇಲ್‌ಗಳಲ್ಲಿ ತಿಂಡಿ ಬೆಲೆಗಳನ್ನು ಇಳಿಸುವ ಅಧಿಕಾರ ಸರ್ಕಾರಕ್ಕೆ ಇಲ್ಲವೆಂದು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ನಿನ್ನೆ ಮಂಗಳೂರಿನಲ್ಲಿ ತಿಳಿಸಿದರು.

○

ಕೊಲೆ ಪ್ರಯತ್ನ

ಕೇರಳದ ಮಂತ್ರಿ ಮಹಮದ್ ಕೋಯರವರ ಕೊಲೆ ಪ್ರಯತ್ನ ನಿನ್ನೆ ನಡೆದು ವಿಫಲವಾಯಿತು. ಪೂರ್ಕ್ಕಿಸ್ಟನೋರ್ವನೆ ನಡೆಸಿದ ಈ ಪ್ರಯತ್ನದಲ್ಲಿ ಮಂತ್ರಿಯವರಿಗೆ ಸ್ವಲ್ಪ ಗಾಯಗಳಾಗಿವೆ.

ಮಲೇರಿಯಾ ನಾಶಕ್ಕೆ

ಮಲೇರಿಯಾ (ಕೆಟ್ಟ ಗಾಳಿ) ಕಾಯಿಲೆ ಕ್ರಿ ಪೂ. 5 ನೇ ಶತಮಾನದಿಂದ ಬರುವವೆಂದು, 20 ವರ್ಷಗಳ ಹಿಂದೆ ಆದರಿಂದ ವರ್ಷಕ್ಕೆ 30 ಲಕ್ಷ ಜನ ಸಾಯುತ್ತಿದ್ದರೆಂದು, ಭಾರತದಲ್ಲಿ ಹತ್ತು ಲಕ್ಷ ಜನ ಸಾಯುತ್ತಿದ್ದರೆಂದು ಹವ ದೆಹಲಿಯ ವಾರ್ತೆ. ನಾಲ್ಕನೆಯ ಯೋಜನೆಯಲ್ಲಿ ಮಲೇರಿಯಾ ನಾಶಕ್ಕೆ ರೂ. 1 ಕೋಟಿ 72 ಲಕ್ಷ ಮಂಜೂರಾಗಿದೆ.

ಕರಡಿಯಿಂದ ಸಾವು

ರೋಗೆಲ್ಲ ಅರಣ್ಯದಲ್ಲಿ ಸೌದೆ ಕಡಿಯುತ್ತಿದ್ದ ಒಬ್ಬ 50 ವರ್ಷದ ಲಂಬಾಣಿಯನ್ನು ಒಂದು ಕರಡಿ ಕೊಂದಿತೆಂದು ಕೊತೆಗುಡೆಂ ವಾರ್ತೆ.

ಕೇರಳದಲ್ಲಿ ಮಾರ್ಕ್ಸಿಸ್ಟರ ಭೂಮಿ ಆಕ್ರಮಣ ಕಾರ್ಯದಲ್ಲಿ ಸಂಬಂಧಿಸಿದ ಚಳುವಳಿಯಲ್ಲಿ ಇವರಿಗೂ ಭೂ ಮಾಲೀಕರಿಗೂ ಹೊಡೆದಾಟವಾಗುತ್ತಿದೆ. ಗಾಯಗೊಂಡ ಮಾರ್ಕ್ಸಿಸ್ಟರನ್ನು ಆಸ್ಪತ್ರೆಗೆ ಸೇರಿಸಲಾಗುತ್ತಿದೆ.

ಡಾಕ್ಕಾದ ಟಾಂಗಿಯಲ್ಲಿನ ಬಾಟಾ ಷೂ ಕಾರ್ಖಾನೆ ಮೇಲೆ ಕಾರ್ಮಿಕರು ದಾಳಿ ಮಾಡಲು ಅಲ್ಲಿದ್ದ ಬ್ರಿಟಿಷ್ ಮ್ಯಾನೇಜರ್ ಮತ್ತಿತರ ಹದಿನೈದು ಮಂದಿ ಗಾಯಗೊಂಡರು.

ಗೋರಕ್ಷಣೆಗೆ ಚಂದಾ ಮತ್ತು ಡೊನೇಷನ್ ಪಾವತಿಮಾಡುವ ವಿಳಾಸ

1. ಶ್ರೀ ಆನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ
ಹೊಂಗನೂರು, ಚಾಮರಾಜನಗರ ತಾಲ್ಲೂ
2. ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಟಾಲಜರ್, 180 ನ್ಯೂ ಬ್ಲಾಕ್,
ವಿದ್ಯಾರಣ್ಯಪುರಂ, ಮೈಸೂರು.
3. ಡಾ || ಪಿ ಎಸ್ ನಾರಾಯಣ್, ಮತ್ತು ಪಿ ಎಸ್. ವಿಶ್ವನಾಥ್,
ಪ್ರಾಣಿದಯಾ ಪ್ರಚಾರಕರು, 320 – 5 ನೆ ಬ್ಲಾಕ್, ಜಯನಗರ, ಬೆಂಗಳೂರು
1. ಗೋರಕ್ಷಣ ಆಫೀಸ್, ಸತ್ಯವಾದಿ ಪ್ರೆಸ್ ಚಾಮರಾಜಪುರಂ, ಮೈಸೂರು

SHAKTI
SUDHA
A Superb Tonic

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ
ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆವಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ 2

ದೇಶದ ಹಿತಕಾಗಿ
ಕುಟುಂಬ ಯೋಜನೆ

ಅಖಿಲ ಭಾರತದಲ್ಲಿ ಕೂಡಲೇ
ಗೋವಧೆ ನಿಷೇಧವಾಗಲಿ

ವುಡ್‌ಲ್ಯಾಂಡ್ಸ್ ತಾ. 2–1–70 ರಿಂದ
ಶಿ ನ ಮಾ ಅಮೋಘ ಪ್ರಾರಂಭ
ಓರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅಮೋಘ ಕನ್ನಡ ಚಿತ್ರ
ಗೆಜ್ಜೆ ಪೂಜೆ
ನಟವರ್ಗ– ಕಲ್ಪನ, ಅಶ್ವತ್ಥ್, ಬಾಲಕೃಷ್ಣ, ಪಂಡರಿಬಾಯಿ
ನಿರ್ದೇಶನ : ಪುಟ್ಟಣ್ಣ ಕಣಗಾಲ್ ಸಂಗೀತ : ವಿಜಯ ಭಾಸ್ಕರ್
[ದಿನ 3 ಪ್ರದರ್ಶನಗಳು]

ಆಪೆರಾ— ಅಮೋಘ 2ನೇ ವಾರ
.... ಅತ್ಯಮೋಘ ಹಿಂದಿ ಚಿತ್ರ ....
ನನ್ನ ಘರಿ ಪ್ಪಟ್ಟೆ
ನಿರ್ದೇಶನ ಟಿ. ಪ್ರಕಾಶರಾವ್ ಸಂಗೀತ ಕಲ್ಯಾಣಜಿ ಆನಂದಜಿ (ಕಲರ್)
ದಿನ 3 ಆಟಗಳು

Help The Gorakshana

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಾಗಿ ನಡೆಯಲಿ
ಗೋರಕ್ಷಣೆಗೆ ಬೆಂಬಲ ಕೊಡಿ
Protect the Cow

Quality Printing — Neat Binding
Lakshminarasimha Press
Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore